ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ 1993-94ನೇ ಸಾಲಿನಲ್ಲಿ ಅಭಾವ ಪರಿಹಾರ, ಅತಿವೃಷ್ಟಿ ಶೀರ್ಷಿಕೆಯಲ್ಲಿಯಾಗಲೀ ಬಿಡುಗಡೆ ಮಾಡಿದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 337(660)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 1993-94ನೇ ಸಾಲಿನಲ್ಲಿ ಅಭಾವ ಪರಿಹಾರ ಹಣದಲ್ಲಿಯಾಗಲೀ ಅತೀವೃಷ್ಟಿಯಾಗಲೀ ಬಿಡುಗಡೆ ಮಾಡಿದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಒಂದು ವೇಳೆ ಕೆಲವು ಕ್ಷೇತ್ರಗಳಲ್ಲಿ ಹೆಚ್ಚು ಹಣ ಕೊಡುವುದು ಅವಶ್ಯಕವೆನಿಸಿದರೆ ಆ ಅವಶ್ಯಕತೆಯ ವಿವರಗಳೇನು? ಅಂತಹ ಅವಶ್ಯಕತೆ ಇರುವ ಎಲ್ಲಾ ಕ್ಷೇತ್ರಗಳಿಗೆ ಅದೇ ಪ್ರಕಾರ ಹಣ ಕೊಡಲಾಗಿದೆಯೇ?

ಇ) ಈ ಹಣದಲ್ಲಿ ಕುಡಿಯುವ ನೀರಿಗಾಗಿ ಯಾವ ಯಾವ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಆ ಹಣದಿಂದ ಯಾವ ಯಾವ ಕ್ಷೇತ್ರಕ್ಕೆ ಎಷ್ಟು ಕೊಳವೆ ಬಾವಿಗಳನ್ನು ಕೊರೆದಿರುವುದು.

ಈ) ಪೂರ್ಣಗೊಂಡಿರುವ ಕಿರು ನೀರು ಸರಬರಾಜು ಹಾಗೂ ಪೈಪು ನೀರು ಸರಬರಾಜು ಯೋಜನೆಗಳು ಎಷ್ಟು?

ಉ) ಈ ಹಣದಿಂದ ಅವಶ್ಯವಿರುವ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಾದ ಕಲ್ಕಂ, ಅಳ್ಳಳ್ಳಿ, ಹೊಸಳ್ಳಿ, ತೊಲಮಾಮಿಡಿ, ಇತ್ಯಾದಿ ಮತ್ತು ಸೇಡಂ ಕ್ಷೇತ್ರದ ಚಿತ್ತಾಪೂರ ತಾಲ್ಲೂಕಿನ ಹೀರಾಮಣಿ ತಾಂಡ, ಹಾಬಾ ನಾಯಕ ತಾಂಡ, ಯುಗಾಪುರ ಪತ್ತು ನಾಯಕ ತಾಂಡ ಇತ್ಯಾದಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸದಿರಲು ಕಾರಣವೇನು ಹಾಗೂ ಯಾವಾಗ ಬಗೆಹರಿಸಲಾಗುವುದು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಗೆ 1993-94ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಹಣವನ್ನು ಬಿಡುಗಡೆ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

ಅಭಾವ ಪರಿಹಾರ ಕಾಮಗಾರಿಗಳಿಗೆ	ಅತೀವೃಷ್ಟಿ ಕಾಮಗಾರಿಗಳಿಗೆ	ಒಟ್ಟು
170.00	255.00	425.00

ತಾಲ್ಲೂಕುವಾರು ವಿವರವನ್ನು ಅನುಬಂಧ 'ಅ'ನಲ್ಲಿ ನೋಡುವುದು.

ಆ) ಹಾನಿಯ ಅಗತ್ಯಕ್ಕನುಗುಣವಾಗಿ ಮತ್ತು ಜಿಲ್ಲೆಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ದೊರೆಯುವ ಹಣವನ್ನು ನೋಡಿಕೊಂಡು ಹಣ ಬಿಡುಗಡೆ ಮಾಡಲಾಗಿದೆ ಮತ್ತು ನೊಂದ ಸಂತ್ರಸ್ಥರಿಗೆ ಹಂಚಲಾಗಿದೆ.

೫) ಗುಲ್ಬರ್ಗಾ ಜಿಲ್ಲೆಗೆ 1993-94ನೇ ಸಾಲಿಗೆ ಕುಡಿಯುವ ನೀರಿನ ಪೂರೈಕೆಗಾಗಿ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಕೆಳಕಂಡಂತೆ ತಾಲ್ಲೂಕುವಾರು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಕೊಳವೆ ಬಾವಿಗಳ ಸಂಖ್ಯೆ
1.	ಅಫಜಲಪುರ	24
2.	ಅಳಂದ	38
3.	ಚಂಚೋಳಿ	36
4.	ಚಿತ್ತಾಪುರ	41
5.	ಗುಲ್ಬರ್ಗಾ	46
6.	ಜೇವರ್ಗಿ	22
7.	ಯಾದಗಿರ್	6
8.	ಶಹಾಪೂರ	10
9.	ಸೇಡಂ	14
	ಒಟ್ಟು	237

ಅನುಷ್ಠಾನಾಧಿಕಾರಿವಾರು ಬಿಡುಗಡೆ ಮಾಡಿರುವ ಹಣದ ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಅನುಷ್ಠಾನಾಧಿಕಾರಿಯ ಹೆಸರು	ಬಿಡುಗಡೆ ಮಾಡಿದ ಹಣ
1.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಗುಲ್ಬರ್ಗಾ	24.250
2.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಯಾದಗೀರ್	23.000
3.	ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಗುಲ್ಬರ್ಗಾ ನಗರ (ಅ)	18.281
	ತಾಲ್ಲೂಕು ಪಟ್ಟಣ ಪ್ರದೇಶ (ಆ)	5.000
4.	ಪುರಸಭೆ-ಸೇಡಂ : ಶಹಾಬಾದ್	3.474
5.	ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಗುಲ್ಬರ್ಗಾ ಜಿಲ್ಲೆ	17.639
6.	ಸಹಾಯಕ ಆಯುಕ್ತರು, ಯಾದಗೀರ್ ಸೇಡಂ	8.000
	ಒಟ್ಟು	99.644

ಈ) ಗುಲ್ಬರ್ಗಾ ಜಿಲ್ಲೆಯಲ್ಲಿ ಪೂರ್ಣಗೊಂಡ ಕಿರುನೀರು ಸರಬರಾಜು ಮತ್ತು ಪೈಪು ನೀರು ಸರಬರಾಜು ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	ಕಿರುನೀರು ಸರಬರಾಜು ಯೋಜನೆ ಸಂಖ್ಯೆ	ಪೈಪು ಮೂಲಕ ನೀರು ಸರಬರಾಜು ಯೋಜನೆ ಸಂಖ್ಯೆ
ಅಫಜಲಪೂರ	2	2
ಅಳಂದ	3	-
ಸೇಡಂ	1	-

ಉ) ಚಿತ್ತಾಪುರ ತಾಲ್ಲೂಕಿನ ಹೀರಾಮಣಿ ತಾಂಡಾ, ಹಾಬಾ ನಾಯಕ ತಾಂಡದಲ್ಲಿ ಈಗಾಗಲೇ 2 ಮತ್ತು 1 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಮತ್ತೊಂದು ಕೊಳವೆ ಬಾವಿ ಕೊರೆಯಲು ಆದೇಶ ನೀಡಿದ್ದು, ಕೊರೆದಿರುವ ಕೊಳವೆ ಬಾವಿಗಳಿಗೆ ಕೈ ಪಂಪುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಪತ್ತು ನಾಯಕ ತಾಂಡ ಮತ್ತು ಯಾಗಾಪೂರ ಗ್ರಾಮದಲ್ಲಿ ಹಾಲಿ 2 ಕೊಳವೆ ಬಾವಿಗಳು ಇದ್ದು 94-95ರ ಸಾಲಿನಲ್ಲಿ ಇನ್ನೂ ಒಂದು ಕೊಳವೆ ಬಾವಿ ಕೊರೆಯಲು ಕ್ರಮ ಕೈಗೊಳ್ಳಲಾಗಿದೆ. ಸೇಡಂ ತಾಲ್ಲೂಕಿನ ಕಲಕ್ಕಂ ಮತ್ತು ಅಳ್ಳಳ್ಳಿ ಗ್ರಾಮಗಳಿಗೆ ತಲಾ ಒಂದೊಂದು ಕೊಳವೆ ಬಾವಿ ಮಂಜೂರಾಗಿದ್ದು, ಭೂ ವಿಜ್ಞಾನಿಗಳಿಂದ ನೀರಿನ ಸೆಲೆಯನ್ನು ಪರೀಕ್ಷಿಸಿ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಳ್ಳಳ್ಳಿ ಗ್ರಾಮದಲ್ಲಿ ಕೊರೆದ ಬಾವಿ ವಿಫಲಗೊಂಡಿರುವುದರಿಂದ, ಭೂ ವಿಜ್ಞಾನಿಗಳಿಂದ ಪರೀಕ್ಷಿಸಲಾಗಿ ಕಲಕಂ ಗ್ರಾಮ ಜಲರಹಿತ ಪ್ರದೇಶವೆಂದು ತಿಳಿಸಿರುವ ಕಾರಣ, ಕಲಕಂ ಮತ್ತು ಅಳ್ಳಳ್ಳಿ ಗ್ರಾಮಗಳಿಗೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಂಯುಕ್ತ ನೀರು ಸರಬರಾಜು ಯೋಜನೆ ಮಂಜೂರಾಗಿದ್ದು, ಶೀಘ್ರದಲ್ಲಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ - ಅ

1993-94ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿದ ಅನುದಾನದ ತಾಲ್ಲೂಕುವಾರು ವಿವರಗಳನ್ನು ತೋರುವ ತಃಖ್ತೆ.

ಕ್ರಮ ಸಂಖ್ಯೆ	ಅನುಷ್ಠಾನಾಧಿಕಾರಿ ಹೆಸರು	ಬಿಡುಗಡೆ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)	
		ಅಭಾವ ಪರಿಹಾರ	ಅತೀವೃಷ್ಟಿ
(1)	ಉಪ ನಿರ್ದೇಶಕರು, ಪಶು ವೈದ್ಯ ಮತ್ತು ಸಂರಕ್ಷಣೆ ಗುಲ್ಬರ್ಗಾ.	0.057	-
(2)	ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಗುಲ್ಬರ್ಗಾ	3.030	-
	ಸೇಡಂ	1.650	-
	ಯಾದಗಿರಿ	0.360	-
	ಜೇವರ್ಗಿ	0.918	-
	ಚಿಂಚೋಳಿ	0.950	-
	ಅಳಂದ	2.500	-
	ಅಫಜಲಪೂರ	0.600	-
	ಶೋರಾಪುರ	0.350	-
	ಶಹಾಪೂರ	1.000	-
	ಚಿತ್ತಾಪೂರ	6.547	-
(3)	ಮುಖ್ಯಾಧಿಕಾರಿಗಳು, ಪುರಸಭೆ, ಶಹಾಬಾದ್	2.674	-
	ಸೇಡಂ	0.800	-
(4)	ಕಾರ್ಯ ನಿರ್ವಾಹಕ ಅಭಿಯಂತರರು, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಗುಲ್ಬರ್ಗಾ ನಗರ	16.781	-
	2-ತಾಲ್ಲೂಕ ಪಟ್ಟಣ ಪ್ರದೇಶ	5.000	-
(5)	ಸಹಾಯಕ ಕಮೀಷನರ್, ಯಾದಗಿರಿ	7.500	-
	,, ಸೇಡಂ	10.500	-
(6)	ಕಾರ್ಯ ನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ		
	1) ಯಾದಗಿರಿ	62.650	75.480
	2) ಗುಲ್ಬರ್ಗಾ	28.750	21.900
(7)	ತಹಶೀಲ್ದಾರ, ಗುಲ್ಬರ್ಗಾ	-	7.500
	,, ಅಳಂದ	-	2.870

	,, ಅಫಜಲಪೂರ	-	8.000
	,, ಜೇವರ್ಗಿ	-	12.600
	,, ಯಾದಗಿರಿ	-	5.500
	,, ಶಹಾಪೂರ	-	8.345
	,, ಶೋರಾಪುರ	-	17.500
	,, ಸೇಡಂ	-	3.500
	,, ಚಿತ್ತಾಪೂರ	-	4.200
	,, ಚಿಂಚೋಳಿ	-	3.000
(8)	ಸಹಾಯಕ ನಿರ್ದೇಶಕರು, ಕೃಷಿ(ಎನ್‌ಆರ್‌ಎಪಿ),	6.143	2.900
(9)	ಕಾರ್ಯ ನಿರ್ವಾಹಕ ಅಭಿಯಂತರರು, ಲೊ.ಇ.		
	ಗುಲ್ಬರ್ಗಾ	-	2.950
	ಯಾದಗಿರಿ	-	11.300
(10)	ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಗುಲ್ಬರ್ಗಾ	-	15.500
(11)	ಆಯುಕ್ತರು, ಮಹಾನಗರ ಸಭೆ, ಗುಲ್ಬರ್ಗಾ	-	4.125
(12)	ಪ್ರಧಾನ ಕೃಷಿ ಅಧಿಕಾರಿಗಳು, ಗುಲ್ಬರ್ಗಾ	-	25.000
(13)	ಜಿಲ್ಲಾ ಆರೋಗ್ಯ ಅಧಿಕಾರಿಗಳು, ಗುಲ್ಬರ್ಗಾ	-	5.000
	ಒಟ್ಟು:	158.760	237.170